
ತಮಿಳುನಾಡಿನ ನಾಯನಾರ್ ಸಂತರು - ೧೦

# ಮಾಣಿಕ್ಯ ವಾಚಕರ್


ಕಥೆ : ಆರ್.ವಿ.
ಚಿತ್ರ : ಶಂಕರ್

**1** ಅರಿಮರ್ದನ ಪಾಂಡ್ಯ ರಾಜನು ಆಗ ಮದುರೈಯನ್ನು ಆಳುತ್ತಿದ್ದ. ತಿರುವಾದವೂರರ್ ಎಂಬುವನು ಅವನ ಮಂತ್ರಿಯಾಗಿದ್ದ. ಒಂದು ದಿನ ಒಬ್ಬ ಸೇನಾಪತಿ ರಾಜನ ಆಸ್ಥಾನಕ್ಕೆ ಬಂದ.





**2** ಮರುದಿನ ತಿರುವಾದವೂರರ್ ಸಮುದ್ರ ತೀರಕ್ಕೆ ಪಲ್ಲಕ್ಕಿಯಲ್ಲಿ ಹೊರಟ. ಅವನೊಂದಿಗೆ ರಾಜನ ಸೈನ್ಯವೂ ಇತ್ತು. ಒಂಟೆಗಳು ಚಿನ್ನದ ಚೀಲಗಳನ್ನು ಹೊತ್ತು ಸಾಗಿದವು.


**3** ತಿರುವಾದವೂರರ್ ಮೇಲೆ ಕೃಪೆ ತೋರಲು ಶಿವನಿಗೆ ಇಚ್ಛೆಯುಂಟಾಯಿತು. ತಿರುಪ್ಪೆರುಂದೊರೈ ಬಳಿ ಆಲದ ಮರದಡಿಯಲ್ಲಿ ಅವನು ತನ್ನ ಗಣಗಳೊಂದಿಗೆ ಕುಳಿತ.....





**4** ಪಲ್ಲಕ್ಕಿಯಿಂದಿಳಿದ ತಿರುವಾದವೂರರ್, ಶಿವನನ್ನು ನಮಸ್ಕರಿಸಿದ. ಶಿವನು ಅವನಿಗೆ ಒಂದು ಮಂತ್ರವನ್ನು ನೀಡಿ, ತನ್ನ ದಿವ್ಯದರ್ಶನ ಮಾಡಿಸಿದ. ತನ್ನನ್ನು ತಾನು ಮರೆತ ತಿರುವಾದವೂರರ್, ಸ್ತುತಿಯೆಂಬ ಮಾಣಿಕ್ಯದಿಂದ ಮಾಲೆಯನ್ನು ಮಾಡಿ, ಶಿವನಿಗೆ ತೊಡಿಸಿದ. ಹೀಗೆ ಅವನು 'ಮಾಣಿಕ್ಯ ವಾಚಕರ್' (ಮಾಣಿಕ್ಯದಂತಹ ಮಾತುಗಳನ್ನು ಹೊಂದಿದವನು ಎಂದರ್ಥ) ಆದ.



**5** ಅನಂತರ ರಾಜನು ತನಗೊಪ್ಪಿಸಿದ್ದ ಕಾರ್ಯವನ್ನೇ ಮಂತ್ರಿ ಮರೆತುಬಿಟ್ಟನು. ಕುದುರೆಗಳನ್ನು ಖರೀದಿಸಲು ತಂದಿದ್ದ ಸಂಪತ್ತನ್ನೆಲ್ಲ ಶಿವದೇವಾಲಯದ ಜೀರ್ಣೋದ್ಧಾರಕ್ಕಾಗಿ ವಿನಿಯೋಗಿಸಿದ.




**6** ಜ್ಯೇಷ್ಠಮಾಸದಲ್ಲೂ ಕುದುರೆಗಳು ಬಾರದಿದ್ದಾಗ ರಾಜನು ಮಂತ್ರಿಯನ್ನು ವಿಚಾರಿಸಲು ಅವನ ಬಳಿಗೆ ಸೈನಿಕರನ್ನು ಕಳುಹಿಸಿದ.





ದೇವರ ಅಶರೀರವಾಣಿ ಈ ರೀತಿ ಕೇಳಿಸಿತು.


**7** ಮಂತ್ರಿಯು ಕುದುರೆಗಳನ್ನು ಖರೀದಿಸದೆ ಹಣವನ್ನೆಲ್ಲ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಬಳಸಿದ್ದಾನೆ ಎಂದು ರಾಜನಿಗೆ ತಿಳಿದುಬಂತು. ಅತ್ಯಂತ ಕೋಪಕ್ಕೆ ಒಳಗಾದ ಅವನು ಕೂಡಲೇ ತಿರುವಾದವೂರರ್‌ನನ್ನು ಬಂಧಿಸಿ ಕರೆತರಲು ಆಜ್ಞೆಯಿತ್ತ. ಸೈನಿಕರು ಅವನನ್ನು ಬಂಧಿಸಿ ರಾಜನೆದುರು ಕರೆತಂದರು.





**8** ಮಂತ್ರಿಯನ್ನು ಕತ್ತಲೆಯ ಸೆರೆಮನೆಯಲ್ಲಿಟ್ಟು, ಪ್ರತಿದಿನವೂ ಅವನು ಭಾರವಾದ ಇಟ್ಟಿಗೆಗಳನ್ನು ಸಾಗಿಸುವ ಕೆಲಸ ಕೊಟ್ಟರು.

**9** ಮೂಲಾನಕ್ಷತ್ರದಂದು ರಾತ್ರಿ ಆ ಪ್ರದೇಶದ ನರಿಗಳೆಲ್ಲಾ ಶಿವನ ಆದೇಶದಂತೆ ಕುದುರೆಗಳಾಗಿ ಮಾರ್ಪಟ್ಟವು. ಶಿವನ ಗಣಗಳು ಸವಾರರಾದರು. ಸಾಕ್ಷಾತ್ ಶಿವನೇ ಅವರ ದಂಡನಾಯಕನಾದ. ಮರುದಿನ ಬೆಳಿಗ್ಗೆ ಮದುರೆಯ ಬೀದಿಯುದ್ದಕ್ಕೂ ಕುದುರೆಗಳ ಮೆರವಣಿಗೆ ಸಾಗಿ ಬಂತು.





10
ಆಹಾ! ಎಂಥ ಅದ್ಭುತ ಕುದುರೆಗಳು, ಎಂಥ ಸವಾರರು! ಸೈನಿಕರೇ, ಈಗಲೇ ನೀವು ಮಂತ್ರಿಯ ಬಳಿಗೆ ಹೋಗಿ, ಅವನಿಗೆ ನಮಸ್ಕಾರ ಮಾಡಿ ಇಲ್ಲಿಗೆ ಕರೆತನ್ನಿ.
11
ತಿರುವಾದವೂರರ್, ಆಲೋಚನೆ ಮಾಡದೆ ನಾನು ನಿನ್ನನ್ನು ದಂಡಿಸಿದೆ. ದಯವಿಟ್ಟು ನನ್ನನ್ನು ಕ್ಷಮಿಸು.
12
ಅಂದು ರಾತ್ರಿ ಇಡೀ ಪಟ್ಟಣದಲ್ಲಿ ಎಲ್ಲೆಲ್ಲೂ ನರಿಗಳ ಊಳಿಡುವ ಸದ್ದು ಕೇಳಿಸಿತು. ರಾಜ ಎಚ್ಚೆತ್ತು ಅದೇನೆಂದು ನೋಡಿದ.
ಓ? ಎಂಥ ಮೋಸ ! ನರಿಗಳೇ ಕುದುರಗಳಾಗಿ ಕಾಣಿಸಿಕೊಂಡಿದ್ದವು! ಮಂತ್ರಿಯನ್ನು ಬಂಧಿಸಿ ಸೆರೆಮನೆಗೆ ಹಾಕಿ. ಅವನಿಗೆ ಸರಿಯಾದ ಶಿಕ್ಷೆ ವಿಧಿಸಿ !
13
ಮತ್ತೆ ತಿರುವಾದವೂರರ್ ಸೆರೆಮನೆಗೆ ಹೋದ. ಅವನಿಗೆ ಕ್ರೂರ ಶಿಕ್ಷೆ ವಿಧಿಸಿದರು.
14
ಶಿವನ ಇಚ್ಛೆಯಂತೆ, ವೈಗೈ ನದಿಯಲ್ಲಿ ಪ್ರವಾಹ ಉಕ್ಕಿ ಬಂತು. ನೀರು ಪಟ್ಟಣದ ಎಲ್ಲೆಡೆ ನುಗ್ಗಿತು. ರಾಜ ಆತಂಕದಿಂದ ಓಡಿ ಬಂದ.
ಕಟ್ಟೆ ಒಡೆದಿರುವಲ್ಲಿ ಮಣ್ಣುಹಾಕಿ ಮುಚ್ಚಬೇಕು. ಅದಕ್ಕಾಗಿ ಎಲ್ಲರ ಮನೆಯಿಂದ ಒಬ್ಬೊಬ್ಬ ಬರಲಿ. ನೀರನ್ನು ಹೇಗಾದರೂ ತಡೆಹಿಡಿಯಬೇಕು.


**15** ನದೀತೀರದಲ್ಲಿ ಜನರೆಲ್ಲರೂ ಬುಟ್ಟಿಯಲ್ಲಿ ಮಣ್ಣು ತುಂಬಿ ಕಟ್ಟೆ ಕಟ್ಟಿದರು. ರೊಟ್ಟಿ ಮಾರಿ ಜೀವನ ಸಾಗಿಸುತ್ತಿದ್ದ ಮುದುಕಿಯೊಬ್ಬಳು ಅಲ್ಲಿದ್ದಳು. ವಂದಿ ಎಂದು ಆಕೆಯ ಹೆಸರು. ತನ್ನ ಜಾಗದಲ್ಲಿ ಮಣ್ಣು ತುಂಬಿಕೊಡಬಲ್ಲವರು ಯಾರಾದರೂ ಇದ್ದಾರೆಯೇ ಎಂದು ಅವಳು ಹುಡುಕುತ್ತಿ ದ್ದಳು. ಸಾಕ್ಷಾತ್ ಶಿವನೇ ಒಬ್ಬ ಕೆಲಸದವನ ವೇಷ ಧರಿಸಿ ಅಲ್ಲಿಗೆ ಬಂದ.




**16** ಚೆನ್ನಾಗಿ ಮಣ್ಣು ಸಾಗಿಸುವ ಕೆಲಸ ಸಾಗಿತ್ತು. ಮುದುಕಿಯ ಬದಲಿಗೆ ಬಂದ ಯುವಕ ಮಾತ್ರ ಒಂದೆಡೆ ಕುಳಿತು, ಉಳಿದವರು ಕೆಲಸ ಮಾಡುತ್ತಿದ್ದುದನ್ನು ನೋಡುತ್ತಿದ್ದ. ರಾಜ ಇದನ್ನು ನೋಡಿಬಿಟ್ಟ.




**17** ರಾಜನು ಅವನಿಗೆ ಚಾಟಿ ಏಟು ಕೊಟ್ಟ. ಆಗ ಅಲ್ಲಿ ಇದ್ದವರಿಗೆಲ್ಲಾ ಬೆನ್ನ ಮೇಲೆ ಬಾಸುಂಡೆಯೆದ್ದಿತು. ರಾಜನಿಗೂ ಏಟಿನ ನೋವು ಅನುಭವಕ್ಕೆ ಬಂತು. ಆದರೆ ಕೂಡಲೇ ಅವನಿಗೆ ಎಲ್ಲವೂ ಅರ್ಥವಾಯಿತು. ಅವನು ಕೂಡಲೇ ಸೆರೆಮನೆಯಲ್ಲಿದ್ದ ತಿರುವಾದವೂರರ್ ಬಳಿಗೆ ಓಡಿದ.




**18**

ಶಿವನ ಕೃಪೆಯಿಂದಾಗಿ ನೆರೆ ಇಳಿದುಹೋಯಿತು. ಮಾಣಿಕ್ಯ ವಾಚಕರ್ ರಾಜನಿಗೆ ವಿದಾಯ ಹೇಳಿ ಸಂನ್ಯಾಸ ಸ್ವೀಕಾರ ಮಾಡಿದ. ಹಲವು ಶಿವನ ಕ್ಷೇತ್ರಗಳನ್ನು ಸಂದರ್ಶಿಸಿ, ಕೊನೆಗೆ ಅವನು ಚಿದಂಬರಂಗೆ ಬಂದ. ಅಲ್ಲಿ ಅವನು ಶಿವನಲ್ಲಿ ಲೀನವಾಗಿ ಹೋದ. ಅವನು 'ತಿರುವಾಚಕಂ' ಎಂಬ ಸ್ತುತಿಯನ್ನು ತಮಿಳಿನಲ್ಲಿ ರಚಿಸಿದ. ಭಗವಂತನ ಮಹಿಮೆಯನ್ನು ಸಾರುವ ಈ ಕೃತಿಯು ತಮಿಳು ಸಾಹಿತ್ಯದಲ್ಲಿ ಒಂದು ಅಪೂರ್ವ ಕೃತಿರತ್ನವಾಗಿದೆ.

